**<u>ದಿನಾಂಕಃ 23-11-2023 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಸಿ.ವಿ.ಆರ್. ವಕೀಲರ ಪರವಾಗಿ ಶ್ರೀ ಸಿ.ಸಿ.ಆರ್., 1 ರಿಂದ 5 ನೇ ಪ್ರತಿವಾದಿ ಪರ ವಕೀಲರಿಂದಃ</u>**

**16.** ಸದರಿ ಪ್ರಕರಣದಲ್ಲಿ ನಾವು ಬಾವಾನ ಮಠದ ಟ್ರಸ್ಟನ್ನು ಪಕ್ಷಗಾರರನ್ನಾಗಿ ಮಾಡಿರುತ್ತೇವೆ. ಪ್ರತಿವಾದಿ ನಂ.7 ಹಾಗೂ 8 ರ ಬ್ಯಾಂಕ್‌ಗಳಲ್ಲಿ ಇಟ್ಟಿರುವ ಹಣ ಮಠಕ್ಕೆ ಸಂಬಂಧಿಸಿದ್ದು ಅಂತಾ ತೋರಿಸುವ ಕುರಿತು ದಾಖಲೆ ಹಾಜರು ಪಡಿಸಿರುತ್ತೇವೆ. ಸದರಿ ಹಣವು ಕಳೆದ 14-15 ವರ್ಷಗಳಿಂದ ಜಮಾ ಇರುತ್ತದೆ. ನಾನು ಮಠಕ್ಕೆ ಸಂಬಂಧಿಸಿದ ಎಫ್.ಡಿ.ರಸೀದಿಗಳನ್ನು ಹಾಜರು ಪಡಿಸಿದ ಬಗ್ಗೆ ನಮ್ಮ ವಕೀಲರನ್ನು ಕೇಳಬೇಕು. ನಾನು ಹಾಜರು ಪಡಿಸಿದ ನಿಪಿ-3 ಮರಣ ಪ್ರಮಾಣ ಪತ್ರದಲ್ಲಿ ಮಠದ ಆಸ್ತಿಗಳನ್ನು 1 ರಿಂದ 5 ನೇ ಪ್ರತಿವಾದಿಯರಿಗೆ ಕೊಟ್ಟಿರುತ್ತೇವೆ ಅಂತಾ ಬರೆಸಿರುತ್ತಾರೆಯೇ ಅಂದರೆ ಸಾಕ್ಷಿ ವಕೀಲರನ್ನು ಕೇಳಬೇಕು ಅಂತಾ ಹೇಳುತ್ತಾರೆ. ಸ್ವಾಮಿಗಳು ಸ್ವತಃ ಗಳಿಸಿದ ಹಣವನ್ನು ಬ್ಯಾಂಕ್‌ನಲ್ಲಿ ಡೆಪಾಸಿಟ್ ಮಾಡಿ ಅದರ ಕುರಿತು ಮೃತ್ಯು ಪತ್ರ ಮಾಡಿರುತ್ತಾರೆ ಅಂದರೆ ಸುಳ್ಳು.

**17.** ಕರ್ಜಗಿ ಮಠದ ಲೆಕ್ಕ ಪತ್ರಗಳ ಆಡಿಟ್ ಆಗುತ್ತದೆಯೇ ಅಂದರೆ ಸಾಕ್ಷಿ 12 ವರ್ಷಕ್ಕೊಮ್ಮೆ ಹಂಡಿಬಡಂಗನಾಥ ಮಠದವರು ಬರುತ್ತಾರೆ ಅವರಿಗೆ ಅದರ ಬಗ್ಗೆ ಗೊತ್ತಿರುತ್ತದೆ. ನಾವು ಮೂಲ ಹಂಡಿಬಡಂಗನಾಥ ಮಠವನ್ನು ಈ ಪ್ರಕರಣದಲ್ಲಿ ಪಕ್ಷಗಾರರು ಅಂತಾ ಮಾಡಿಲ್ಲ. ಹಂಡಿಬಡಂಗನಾಥ ಮಠದವರು ಈ ಪ್ರಕರಣ ನಡೆಸಲು ನನಗೆ ಅಧಿಕಾರ ಪತ್ರ ನೀಡಿಲ್ಲ. ಸಾಕ್ಷಿ ಸ್ವತಃ

ಹೇಳುತ್ತಾರೆ ಸಾರ್ವಜನಿಕ ಹಣ ಇರುವುದರಿಂದ ನಾವೇ ಕೇಸ್ ಮಾಡಿರುತ್ತೇವೆ. ಪ್ರತಿವಾದಿ ನಂ.7 ಮತ್ತು 8 ರ ಬ್ಯಾಂಕ್‌ಗಳಲ್ಲಿ ಇರುವ ಎಫ್.ಡಿ.ರಸೀದಿ ಸ್ವಾಮಿಗಳ ಹೆಸರಿನಿಂದ ಇರುತ್ತದೆ ಅಂದರೆ ಸರಿ. ಸಾಕ್ಷಿ ಸ್ವತಃ ಹೇಳುತ್ತಾರೆ. ಮಠದ ಆಸ್ತಿ ಸ್ವಾಮಿಗಳ ಹೆಸರಿನಿಂದ ಇರುತ್ತದೆ. ಸ್ವಾಮಿಗಳ ಹೆಸರಿನಲ್ಲಿ ಎಫ್.ಡಿ.ರಸೀದಿಗಳು ಇದ್ದುದ್ದರಿಂದ ಅದರ ಬಗ್ಗೆ ಮೃತ್ಯು ಪತ್ರ ಮಾಡಿರುತ್ತಾರೆ ಅಂದರೆ ಅದು ತಪ್ಪು ಇರುತ್ತದೆ ಅಂತಾ ಹೇಳುತ್ತಾರೆ.

**18.** ಪಿ ಆ್ಯಂಡ್ ಎಸ್ ಸಿ ನಂಬರ 01/2011 ರ ವಿರುದ್ಧ ನಾವು ಮೇಲ್ಮನವಿ ನ್ಯಾಯಾಲಯದಲ್ಲಿ ಅಪೀಲ್ ದಾಖಲಿಸಿಲ್ಲ. ಸದರಿ ಪ್ರಕರಣದಲ್ಲಿ ಆದ ಆದೇಶ ನಮಗೆ ಬಂಧನಕಾರಕವಾಗಿದ್ದು, ಆದ್ದರಿಂದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇವೆ ಅಂದರೆ ಸರಿಯಲ್ಲ. 1 ರಿಂದ 5 ನೇ ಪ್ರತಿವಾದಿಯರಿಗೆ ತೊಂದರೆ ಕೊಡಬೇಕು ಅಂತಾ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಅಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಶ್ರೀ ಕೆ.ಡಿ.ವಿ. 6 ನೇ ಪ್ರತಿವಾದಿ ಪರ ವಕೀಲರಿಂದಃ</u>

6 ನೇ ಪ್ರತಿವಾದಿಯನ್ನು ಅವರ ಪರ ವಕೀಲರನ್ನು ಕೂಗಿಸಿದಾಗ ಯಾರೂ ಹಾಜರಿರಲಿಲ್ಲ. ಪ್ರಕರಣವು 2014 ನೇ ವರ್ಷಕ್ಕೆ ಸಂಬಂಧಿಸಿದ್ದು ಇದ್ದು ಹೀಗಾಗಿ ಪಾಟೀ ಸವಾಲನ್ನು ಮುಂದೂಡಲು ಯಾವುದೇ ವಿನಂತಿ ಇಲ್ಲದೇ ಇರುವುದರಿಂದ ಅವರ ಪರ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.

ಪಿ.ಡಬ್ಲ್ಯೂ **- 1**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

-Sd/- 23.11.2023.
ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.